**ಚಾಸಾ- 1ಪ್ರಾಸಾ-1**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**
**ಸಿಸಿ. 13735/2019**

| | |
|---|---|
| **ಸಾಕ್ಷಿದಾರರ ಹೆಸರು** | ಅನಿತಾ. |
| **ಗಂಡನ ಹೆಸರು** | ವೈ.ಸಿ. ಉದಯ್ ಕುಮಾರ್, |
| **ವಯಸ್ಸು** | 60 ವರ್ಷ |
| **ಉದ್ಯೋಗ** | ಗೃಹಿಣಿ, |
| **ವಾಸ** | ದೇವರಾಯಸಮುದ್ರ, ಕೋಲಾರ ಜಿಲ್ಲೆ. |
| **ಪ್ರಮಾಣೀಕರಿಸಿದ ದಿನಾಂಕ** | 08.04.2026. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನ್ಯಾಯಾಲಯದ ಮುಂದೆ ಇರುವ 3,5 ಮತ್ತು 7 ನೇ ಆರೋಪಿತರು ಹಾಗೂ ಗೈರು ಹಾಜರಾಗಿರುವ 1, 2, 4 ಮತ್ತು 6ನೇ ಆರೋಪಿತರು ಸಹ ಗೊತ್ತು. 1,2,4 ಮತ್ತು 6 ಆರೋಪಿತರು ಈ ದಿನ ಗೈರು ಹಾಜರಿದ್ದು ಅವರ ಪರ ವಕೀಲರು ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲ ಎಂದು ಹೇಳಿರುತ್ತಾರೆ. ಚಾಸಾ-4 ನನ್ನ ಗಂಡ.ಅದೇ ರೀತಿ ಚಾಸಾ-2,3 ಮತ್ತು 5 ರಿಂದ 10 ರವರು ಗೊತ್ತು. ನಾನು ಕೆ. ಕೃಷ್ಣ ಮೂರ್ತಿ ಎನ್ನುವವರಿಂದ 1998 ರಲ್ಲಿ ಭಾಸ್ಕೋ ನಗರದಲ್ಲಿರುವ ಸೈಟ್ ನಂ.31 ನ್ನು ರೂ.2ಲಕ್ಷ ಹಣವನ್ನು ನೀಡಿ ನನ್ನ ಗಂಡನಾದ ಚಾಸಾ-4 ರವರ ಹೆಸರಿನಲ್ಲಿ ಖರೀದಿ ಮಾಡಿರುತ್ತೇವೆ. ನನ್ನ ಗಂಡ ಖರೀದಿ ಮಾಡಿದ ಸೈಟ್ ನಂ.31 ರಲ್ಲಿ ಅದರ ಮೇಲೆ ಒಂದು ಶೆಡ್ ನ್ನು ಹಾಕಿಕೊಂಡು ಸಂಬಂಧ ಇಲಾಖೆಗೆ ಕಂದಾಯ ಮತ್ತು ನೀರಿನ ತೆರಿಗೆವನ್ನು ಸಹ ಪಾವತಿ ಮಾಡಿಕೊಂಡು ಬರುತ್ತಿದ್ದಾರೆ.

2. 2019 ಜನವರಿ ತಿಂಗಳ ಕೊನೆಯಲ್ಲಿ ನವೀನ್ ಎನ್ನುವ ಬಾಡಿಗೆದಾರರು ನಮಗೆ ಫೋನ್ ಮಾಡಿ ಸದರಿ ಸೈಟ್ ನಂ.31, 32 ಮತ್ತು 33 ಗಳು ಮದೀಪ್ ಎನ್ನುವವರಿಗೆ ಸೇರಿರುತ್ತವೆ ಹಾಗೂ ಶ್ರೀನಿವಾಸ್ ಎನ್ನುವವರಿಗೆ ವಹಿಸಿಕೊಡಲಾಗಿದೆ ಎಂದು ಒಂದು ಬೋರ್ಡ್ ನ್ನು ಹಾಕಿರುತ್ತಾರೆ ಎಂದು ತಿಳಿಸಿರುತ್ತಾರೆ. ಸದರಿ ಬೋರ್ಡ್ ನಲ್ಲಿದ್ದ ಮೊಬೈಲ್ ನಂಬರ್ ಗಳಿಗೆ ಫೋನ್ ಮಾಡಿ

**ಚಾಸಾ- 1ಪ್ರಾಸಾ-1**

ಕೇಳಿದಾಗ ಸದರಿ ಸೈಟ್ ಗಳು ನಮಗೆ ಸೇರಿರುತ್ತವೆ, ನೀವೇನಾದರೂ ಹೋದರೆ ನಿಮ್ಮನ್ನು ಸುಮ್ಮನೇ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ. ಆದಾದ ನಂತರ ದಿ.09.02.2019 ರಂದು ನಾವು ಮೂರು ಜನ ಸೈಟ್ ಗಳ ಮಾಲೀಕರು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇವೆ. ಸದರಿ ಒಂದರಿಂದ 7ನೇ ಆರೋಪಿತರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಮದೀಪ್ ಎನ್ನುವವರಿಗೆ 2014 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದು ತಿಳಿಯಿತು. ಈ ವಿಚಾರವನ್ನು ನಾನು ನನ್ನ ದೂರಿನಲ್ಲಿ ನಮೂದು ಮಾಡಿರುತ್ತೇನೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಇದಾದ ನಂತರ ಪೊಲೀಸರು ಅದೇ ದಿನ ಸ್ಥಳಕ್ಕೆ ಬಂದು ನಾನು ತೋರಿಸಿದ ಜಾಗದಲ್ಲಿ ಮಹಜರ್ ಕ್ರಮ ಜರುಗಿಸಿರುತ್ತಾರೆ. ಆ ಸಂದರ್ಭದಲ್ಲಿ ಚಾಸಾ-2 ಮತ್ತು 3 ರವರು ಸಹ ಹಾಜರಿರುತ್ತಾರೆ. ಸದರಿ ಮಹಜರ್ ನ್ನು ಮಧ್ಯಾಹ್ನ 01.30 ರಿಂದ 03.30 ಗಂಟೆಯವರೆಗೆ ಮಾಡಿರುತ್ತಾರೆ. ಸಾಕ್ಷಿಯು ಈಗ ನೋಡುತ್ತಿರುವ ದಾಖಲೆ ಮಹಜರ್ ಆಗಿದ್ದು, ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು, ಸಾಕ್ಷಿ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮೂಲ ದಾಖಲಾತಿಗಳು ಇಲ್ಲದೇ ಇರುವುದರಿಂದ ಹಿ.ಸ.ಸ.ಅ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಕೋರಿರುತ್ತಾರೆ. ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**